# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1790 (2035) |
| ಸದಸ್ಯರ ಹೆಸರು | : | ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | : | 25.03.2026 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಧಾರವಾಡ ಜಿಲ್ಲೆ ಧಾರವಾಡ ತಾಲ್ಲೂಕಿನ ಹತ್ತಿಕೊಳ್ಳ ಗ್ರಾಮದ ಸರ್ವೆ ನಂಬರ್ 81/01/ಎ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು; ಸದರಿ ಜಮೀನು ಪ್ರಸ್ತುತ ಕಂದಾಯ ದಾಖಲೆಗಳ ಪ್ರಕಾರ ಸರ್ಕಾರಿ ಜಮೀನೇ ಅಥವಾ ಖಾಸಗಿ ವ್ಯಕ್ತಿಗಳಿಗೆ ಸೇರಿದ್ದೇ; (ಸಂಪೂರ್ಣ ವಿವರ ನೀಡುವುದು) | ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕಿನ ಹತ್ತಿಕೊಳ್ಳ ಗ್ರಾಮದ ಸರ್ವೇ ನಂ.81/01/ಎ ಪಹಣಿ ಪತ್ರಿಕೆಯು ಅಸ್ತಿತ್ವದಲ್ಲಿ ಇರುವುದಿಲ್ಲ. ಅದರ ಬದಲಾಗಿ ಸರ್ವೆ ನಂ.81ಎ/1/1ಪೈ ರಲ್ಲಿ ಪಹಣಿ ಪತ್ರಿಕೆ ಇದ್ದು,ಸದರಿ ಸರ್ವೇ ನಂಬರ್ ನಲ್ಲಿ ಒಟ್ಟು 65ಎ-24ಗುಂ-13ಆಣೆ ಜಮೀನು ಇರುತ್ತದೆ.<br>ಸದರಿ ಜಮೀನು ಪ್ರಸ್ತುತ ಕಂದಾಯ ದಾಖಲೆಗಳ ಪ್ರಕಾರ ಖಾಸಗಿ ವ್ಯಕ್ತಿಗಳಿಗೆ ಸೇರಿರುವ ಜಮೀನಾಗಿರುತ್ತದೆ. |
| ಆ) | ಸದರಿ ಸರ್ವೆ ನಂಬರ್ ನ ಜಮೀನಿನಲ್ಲಿ ಗೌಳಿ ಜನಾಂಗದ ಕುಟುಂಬಗಳು ಎಷ್ಟು ವರ್ಷಗಳಿಂದ ವಾಸವಾಗಿವೆ; ಇವರು ವಾಸಿಸುತ್ತಿರುವ ಜಾಗವನ್ನು 'ಕಂದಾಯ ಗ್ರಾಮ' ವೆಂದು ಘೋಷಿಸಿ, ಅವರಿಗೆ "ಹಕ್ಕುಪತ್ರ" ನೀಡುವಂತೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳು ಸರ್ಕಾರದ ಯಾವ ಹಂತದಲ್ಲಿವೆ; | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ. |

| | | |
|---|---|---|
| **ಇ)** | ಸದರಿ ಜಮೀನನ್ನು ಅಥವಾ ಗೌಳಿ ಜನಾಂಗದವರು ವಾಸಿಸುತ್ತಿರುವ ಪ್ರದೇಶವನ್ನು ಇತ್ತೀಚಿನ ದಿನಗಳಲ್ಲಿ ಖಾಸಗಿ ವ್ಯಕ್ತಿಗಳು ಯಾರಾದರೂ ಅಕ್ರಮವಾಗಿ ಅತಿಕ್ರಮಣ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಪ್ರದೇಶವನ್ನು ಇತ್ತೀಚಿನ ದಿನಗಳಲ್ಲಿ ಅಕ್ರಮವಾಗಿ ಅತೀಕ್ರಮಣ ಮಾಡಿಕೊಂಡಿರುವುದು ಕಂಡುಬಂದಿರುವುದಿಲ್ಲ. |
| **ಈ)** | ಒಂದು ವೇಳೆ ಅತಿಕ್ರಮವಾಗಿದ್ದಲ್ಲಿ, ಅಂತಹ ವ್ಯಕ್ತಿಗಳ ವಿರುದ್ಧ ಇಲಾಖೆ ಕೈಗೊಂಡಿರುವ ಕ್ರಮಗಳೇನು; ದಶಕಗಳಿಂದ ಅಲ್ಲಿಯೇ ವಾಸಿಸುತ್ತಿರುವ ಗೌಳಿ ಜನಾಂಗದವರನ್ನು ಒಕ್ಕಲಬ್ಬಿಸದಂತೆ ತಡೆದು ಅವರಿಗೆ ಅದೇ ಜಾಗದಲ್ಲಿ ಕಾನೂನಾತ್ಮಕವಾಗಿ ಹಕ್ಕುಪತ್ರ ನೀಡಲು ಸರ್ಕಾರಕ್ಕಿರುವ ಅಡೆತಡೆಗಳೇನು? | |

**ಸಂಖ್ಯೆ**: ಆರ್‌ಡಿ 34 ಎಲ್‌ಜಿಡಿ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು